

# ವೈನಾಗಿದೆ ವೈನ್!

ವೈನ್.. ಅರ್ಥಾತ್ ದ್ರಾಕ್ಷಾರಸ.. ಹುಡುಗಿಯರು ಇಷ್ಟಪಡುವ ಒಂದು ಪೇಯ. ಕೊಂಚ ಅಮಲು, ವಿಶಿಷ್ಟ ಘಮಲು. ಹೊರಗಿನ ಮೈಕೊರೆಯುವ ಚಳಿಗೆ ಒಂದು ಗ್ಲಾಸ್ ವೈನ್ ಹೊಟ್ಟೆ ಸೇರಿದರೆ 'ಹಾಯ್' ಎನಿಸುವ ಅನುಭವ. ಇದೇ ವೈನ್ ಎಂಬ ಪೇಯದ ವಿಶೇಷತೆ..! ಇಂದಿನ ಜೀವನಶೈಲಿಯಲ್ಲಿ ವೈನ್ ಕುಡಿಯುವುದು ಒಂದು ಫ್ಯಾಷನ್..!

ಬರೀ ಯೀಸ್ಟ್ ಅನ್ನು ಮಾತ್ರ ಸೇರಿಸಿ ಇನ್ನಾವುದೇ ರಾಸಾಯನಿಕ ಬಳಸದೆ ಕಳಿತ ತಾಜಾ ದ್ರಾಕ್ಷಿ ಹಣ್ಣನ್ನು ಸಂಸ್ಕರಿಸಿ ಮಾಡುವ ಈ ಪೇಯ ಆರೋಗ್ಯಕ್ಕೆ ಒಳ್ಳೆಯದು. ಹೀಗಾಗಿ ವೈನ್ ಒಂದು ಆರೋಗ್ಯಕರ ಪೇಯ ಎಂದೂ ಹೆಸರಾಗಿದೆ. ತಾಜಾ ದ್ರಾಕ್ಷಿ ಹಣ್ಣನ್ನು ಹುದುಗು ಬರಿಸಿ ತಯಾರಿಸುವ ಈ ಪೇಯ ಹಳೆಯದಾದಷ್ಟು ರುಚಿ.

ವೈನ್‌ನಲ್ಲೂ ವಿಂಟೇಜ್ ವೈನ್‌ಗೆ ಬೇಡಿಕೆ, ರುಚಿ, ಬೆಲೆ ಎಲ್ಲವೂ ಹೆಚ್ಚು. ಸ್ಪಾರ್ ಹೈಪರ್ ಮಾರ್ಕೆಟ್ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ವೈನ್ ಉತ್ಸವದಲ್ಲಿ ತರಹೇವಾರಿ ವೈನ್ ಕುಡಿಯುವ ಅವಕಾಶ ಒದಗಿಸಲಾಗಿತ್ತು. ಇಲ್ಲಿ ವಿಂಟೇಜ್ ವೈನ್ ಅನ್ನು ಹುಡುಗಿಯರು ಖುಷಿ ಖುಷಿಯಿಂದ ಕುಡಿದರು. ವಿವಿಧ ದೇಶಗಳ ವೈನ್ ರುಚಿ ನೋಡುವ ಸದವಕಾಶವೂ ಇಲ್ಲಿತ್ತು.

ವಿಜಾಪುರದ ವೈನ್‌ಯಾರ್ಡ್ ಇಡೀ ರಾಜ್ಯಕ್ಕೆ ದ್ರಾಕ್ಷಿ ರಸ ಪೂರೈಸುತ್ತದೆ. ಇಲ್ಲಿನ ಹವಾಮಾನವೂ ದ್ರಾಕ್ಷಿ ಬೆಳೆಗೆ ಪೂರಕವಾದದ್ದು. ಬಿಳಿ, ಮೆರೂನ್ ಬಣ್ಣಗಳಲ್ಲಿರುವ ವೈನ್ ವಿವಿಧ ರುಚಿಗಳಲ್ಲೂ ಸಿಗುತ್ತದೆ. ರುಚಿ, ಬ್ರ್ಯಾಂಡ್‌ನಲ್ಲಿ ವ್ಯತ್ಯಾಸವಿದ್ದರೂ ಎಲ್ಲವೂ ತಯಾರಾಗುವುದು ದ್ರಾಕ್ಷಿಯಿಂದಲೇ.

### ಆರೋಗ್ಯ, ಸೌಂದರ್ಯಕ್ಕೆ..

ವೈನ್ ಒಂದು ಆರೋಗ್ಯಕರ ಪೇಯ. ಇದು ಹೃದ್ರೋಗ ಸಮಸ್ಯೆ ನಿವಾರಿಸುತ್ತದೆ. ಶ್ವಾಸಕೋಶಕ್ಕೆ ಒಳ್ಳೆಯದು, ತ್ವಚೆಯ ಕಾಂತಿಗೆ, ಅಲ್ಸರ್ ಸಮಸ್ಯೆ ನಿವಾರಣೆಗೂ ಮದ್ದು. ವೈನ್‌ನಲ್ಲಿ ನೈಸರ್ಗಿಕ ಆ್ಯಂಟಿ ಆಕ್ಸಿಡೆಂಟ್‌ಗಳಿದ್ದು ಜೀರ್ಣಶಕ್ತಿ ವೃದ್ಧಿಯಾಗುತ್ತದೆ. ಕೊಲೆಸ್ಟರಾಲ್ ಕಡಿಮೆ ಮಾಡುವ ಶಕ್ತಿ ಇರುವುದರಿಂದ ಬೊಜ್ಜು, ರಕ್ತದೊತ್ತಡ ನಿವಾರಣೆಗೆ ಅನುಕೂಲಕರವಾಗಿದೆ ಎನ್ನುವುದು ವೈನ್ ಕಂಪೆನಿ ಮಾಲೀಕರ ವಿವರಣೆ.

ಸೌಂದರ್ಯದ ದೃಷ್ಟಿಯಿಂದಲೂ ವೈನ್ ಕುಡಿದರೆ 'ವೈನಾ'ಗಿರಬಹುದು. ಬ್ಯೂಟಿ ಪಾರ್ಲರ್‌ಗಳಲ್ಲಿಯೂ ವೈನ್ ಥೆರಪಿ ಇದೀಗ ಜನಪ್ರಿಯವಾಗುತ್ತಿದೆ. ತ್ವಚೆಯ ಮೇಲಿನ ಸುಕ್ಕು, ನೆರಿಗೆ ನಿವಾರಣೆಯಾಗುತ್ತದೆ. ಆ್ಯಂಟಿ ಏಜಿಂಗ್ ಏಜೆಂಟ್ ಆಗಿಯೂ ಕೆಲಸ ಮಾಡುತ್ತದೆ. ಆದರೆ ಒಂದು ಗ್ಲಾಸ್ ವೈನ್ ಕುಡಿಯಿರಿ. ರುಚಿ, ಆರೋಗ್ಯಕರ, ಸೌಂದರ್ಯ ಎಂದು ಹೇಳುತ್ತಾ ಜಾಸ್ತಿ ಕುಡಿದರೆ ಆರೋಗ್ಯ ಕೈಕೊಡುವ ಸಾಧ್ಯತೆಯಿದೆ.

### ಕೌಟುಂಬಿಕ ಪೇಯ

ವೈನ್ ಕೌಟುಂಬಿಕ ಪೇಯ. ಇದರಲ್ಲಿ ಆಲ್ಕೋಹಾಲಿಕ್ ಅಂಶ ಕಡಿಮೆ. ರಾಜ್ಯದ



ನಾನಾ ಭಾಗಗಳಲ್ಲಿ ದ್ರಾಕ್ಷಿ ಬೆಳೆಯುತ್ತಾರೆ. ವಾಣಿಜ್ಯ ಉದ್ದೇಶಕ್ಕಾಗಿ. ಚನ್ನಪಟ್ಟಣ ತಾಲ್ಲೂಕಿನ ಗಂಗೇನಹಳ್ಳಿಯಲ್ಲಿ ಹೆರಿಟೇಜ್ ಗ್ರೇಪ್ ವೈನರಿಯಲ್ಲಿ ವೈನ್ ಯಥೇಚ್ಛವಾಗಿ ತಯಾರಾಗುತ್ತದೆ.

ಮೊದಲು ದ್ರಾಕ್ಷಿಯನ್ನು ಕ್ರಶ್ ಮಾಡಲಾಗುತ್ತದೆ. ನಂತರದ್ದು ಶುದ್ಧೀಕರಣ ಕೆಲಸ. 20 ಡಿಗ್ರಿ ಉಷ್ಣತೆಯಲ್ಲಿ ಫರ್ಮಂಟೇಶನ್ ಮಾಡಲಾಗುತ್ತದೆ. ಇದಕ್ಕೆ ಯೀಸ್ಟ್ ಸೇರಿಸಿ ಎರಡು ವಾರ ಕಾಲ ಇಡಲಾಗುತ್ತದೆ. ಈ ರಸವನ್ನು ಸೀಸೆಯಲ್ಲಿ ಹಾಕಿ ತುಂಬುತ್ತಾರೆ.

'ವಿಂಟೇಜ್ ವೈನ್ ಅತ್ಯಂತ ರುಚಿ. ಇದು ಹಳೆಯ ವೈನ್. ಹಳೆಯದಾದಷ್ಟು ರುಚಿ ಹೆಚ್ಚು. ಯಂಗ್ ವೈನ್ ಹೊಸದು. ಇದು ಹೆಚ್ಚು ರುಚಿ ಇರಲ್ಲ. ಹೀಗಾಗಿ ವಿಂಟೇಜ್ ವೈನ್‌ಗೆ ಬೇಡಿಕೆಯೂ ಹೆಚ್ಚು, ಬೆಲೆಯೂ ದುಬಾರಿ. ಇದರಲ್ಲಿ ಶೇ.12.5 ಆಲ್ಕೋಹಾಲ್ ಪ್ರಮಾಣ ಇರುವುದು. ಹುಡುಗಿಯರಿಗೆ ಅಚ್ಚುಮೆಚ್ಚಿನ ಪೇಯವೂ ಆಗಿದೆ' ಎನ್ನುತ್ತಾರೆ ಬೆಂಗಳೂರಿನ 'ಸೀಸನ್ ವೈನ್' ಕಂಪೆನಿ ಮಾರುಕಟ್ಟೆ ಅಧಿಕಾರಿ ಆರ್.ಮಣಿ.

ರಾಜ್ಯದ ಶೇ 70ರಷ್ಟು ದ್ರಾಕ್ಷಿ ಬೆಳೆ ವಿಜಾಪುರ ಒಂದರಲ್ಲೇ ಬೆಳೆಯಲಾಗುತ್ತದೆ. ಇಲ್ಲಿನ ವಿನಿಯಾರ್ಡ್‌ನಲ್ಲಿ ಕೆಂಪು ದ್ರಾಕ್ಷಿ ಹೆಚ್ಚಾಗಿ ಸಿಗುತ್ತದೆ. ಇದರಿಂದ ಶಿರಾಜ್ ವೈನ್ ತಯಾರಿಸಲಾಗುತ್ತದೆ. ಗುಲಾಬಿ ದಳಗಳನ್ನು ಹಾಕಿ ಮಾಡುವ ರೋಸ್ ವೈನ್ ಕೂಡ ಅತ್ಯಂತ ಜನಪ್ರಿಯ. ಬಾಟಲಿಯೊಂದಕ್ಕೆ 430 ರಿಂದ 480 ರೂಪಾಯಿ ಬೆಲೆ ಇದೆ. ಪುರುಷರು 2 ಪೆಗ್ ಕೆಂಪು ವೈನ್ ಮತ್ತು ಮಹಿಳೆಯರು ಬಿಳಿ ವೈನ್ ಒಂದು ಪೆಗ್ ಮಾತ್ರ ಕುಡಿಯಬಹುದು ಎನ್ನುತ್ತಾರೆ ಮಣಿ.

ಕರ್ನಾಟಕದಲ್ಲಿ ಅಂದಾಜು 10 ವೈನ್ ತಯಾರಿಕಾ ಕಂಪೆನಿಗಳಿವೆ. ಈ ಎಲ್ಲ ಕಂಪೆನಿಗಳು ವಿವಿಧ ಬ್ರ್ಯಾಂಡ್‌ನ ವೈನ್ ತಯಾರಿಸುತ್ತವೆ. ಇದೀಗ ಚಳಿಗಾಲ ವಾದ್ದರಿಂದ ವೈನ್‌ನ ಸೀಸನ್. ಇದರೊಂದಿಗೆ ಕ್ರಿಸ್‌ಮಸ್, ಹೊಸವರ್ಷವೂ ತಳುಕು ಹಾಕಿಕೊಂಡು ವೈನ್‌ಗೆ ಇನ್ನಷ್ಟು ರಂಗೇರಿದೆ. ಕಿನ್ವಾ, ಬಿಗ್ ಬನ್ಯನ್, ನಾಕಾ, ರಿಕೊ ಮುಂತಾದ ಕಂಪೆನಿಗಳು ಶಿರಾಜ್, ಸೌವಿಗ್ನಾನ್, ಕ್ಯಾಬೆರ್‌ನೆಟ್, ಶೆನಿನ್ ಬ್ಲಾಂಕ್.. ಹೀಗೆ ನಾನಾ ಬ್ರ್ಯಾಂಡ್‌ಗಳ ವೈನ್ ತಯಾರಿಸುತ್ತವೆ.

■ ಅವನೀಶ್